**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಶ್ರೀರಂಗಪಟ್ಟಣ.**

**ದಿನಾಂಕ 6ನೇ ಅಕ್ಟೋಬರ್ ಮಾಹೆ 2020ನೇ ಇಸವಿ**

**ಅಸಲು ದಾವಾ ಸಂಖ್ಯೆ : 177/2010**

**ವಾದಿಯರು : ಶ್ರೀಮತಿ ಭಾಗ್ಯ**

**ವಿರುದ್ದ**

**ಪ್ರತಿವಾದಿಯರು : ವೈರಮುಡಿ ಮತ್ತು ಇತರರು**

**ದಿವಾನಿ ಪ್ರಕ್ರಿಯಾ ಸಂಹಿತೆ ಕಲಂ 151 ರ ರೀತ್ಯಾ ಪ್ರತಿವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 6 ರ ಮೇಲಿನ ಆದೇಶ**

ವಾದಿಯು ಈ ದಾವೆಯನ್ನು ಪ್ರತಿವಾದಿಗಳ ವಿರುದ್ದ ದಾವಾಸ್ತಿಗಳಲ್ಲಿ ತಮ್ಮ ಭಾಗಾಂಶವನ್ನು ಕೋರಿ ಸಲ್ಲಿಸಿರುತ್ತಾರೆ. ಈ ದಾವೆಯನ್ನು ವಾದಿ ಮತ್ತು 3 ನೇ ಪ್ರತಿವಾದಿ ಪರಸ್ಪರ ಷರೀಕಾಗಿ ಸಲ್ಲಿಸಿದ್ದು, 1 ನೇ ಪ್ರತಿವಾದಿ ಹಾಗೂ 3 ನೇ ಪ್ರತಿವಾದಿಯ ತಂದೆ ವಾದಿಯ ಗಂಡ ಅನಂತ ರವರ ತಂದೆ ಕೃಷ್ಣಪ್ಪನವರು ಅರ್ಜಿಯ ಷೆಡ್ಯೂಲ್ ನಲ್ಲಿ ನಮೂದಿಸಿರುವ ಜಮೀನನ್ನು ಒಟ್ಟು ಕುಟುಂಬದ ಹಾಗೂ ಪಿತ್ರಾರ್ಜಿತವಾದ ಈ ದಾವೆಯ ಇತರೆ ಆಸ್ತಿಗಳಿಂದ ಬಂದ ಆದಾಯದಿಂದ ಕೊಂಡುಕೊಂಡಿದ್ದು, ಅದನ್ನು ಈ ಅರ್ಜಿಯ ಷೆಡ್ಯೂಲ್‌ನಲ್ಲಿ ನಮೂದಿಸಿರುವ ವ್ಯಕ್ತಿಗೆ ಮಾರಾಟ ಮಾಡಿರುತ್ತಾರೆ. ಸದರಿ ಕೃಷ್ಣಯ್ಯನವರಿಗೆ ಈ ಆಸ್ತಿಯನ್ನು ಮಾರಾಟ ಮಾಡುವ ಯಾವುದೇ ಹಕ್ಕು, ಅಧಿಕಾರ, ಮಾಲೀಕತ್ವ ಇರುವುದಿಲ್ಲ, ಈ ಆಸ್ತಿಯಲ್ಲಿಯು ಸಹ ವಾದಿಗೆ ಹಾಗೂ ಎಲ್ಲಾ ಪ್ರತಿವಾದಿಗಳಿಗೂ ಭಾಗಾಂಶದ ಹಕ್ಕು ಇರುತ್ತದೆ. ಆದರೆ ವಾದಿಯು ಉದ್ದೇಶ ಪೂರ್ವಕವಾಗಿ ತನ್ನ ಪ್ರತಿವಾದ ಪತ್ರದ ಪ್ಯಾರ 8 ರಲ್ಲಿ ಹೇಳಿದ್ದರೂ ಸಹ

ಅರ್ಜಿಯ ಷೆಡ್ಯೂಲ್ ನಲ್ಲಿ ನಮೂದಿಸಿರುವ ಆಸ್ತಿಯನ್ನು ದಾವೆಯ ಷೆಡ್ಯೂಲ್ ನಲ್ಲಿ ಸೇರಿಸಿರುವುದಿಲ್ಲ ಮತ್ತು ಕ್ರಯದಾರರನ್ನು ಸಹ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಈ ಆಸ್ತಿಯನ್ನು ದಾವೆಯ ಷೆಡ್ಯೂಲ್ ನಲ್ಲಿ ಸೇರಿಸದೆ ಮತ್ತು ಈ ಕ್ರಯದಾರರನ್ನು ಪಕ್ಷಗಾರರನ್ನಾಗಿ ಮಾಡದೇ ಇದ್ದಲ್ಲಿ ದಾವೆಯು ಸಂಪೂರ್ಣವಾಗುವುದಿಲ್ಲ ಮತ್ತು ಭಾಗಾಶಃ ವಿಭಾಗವು ಊರ್ಜಿತವಾಗುವುದಿಲ್ಲ. ವಾದಿಯು ಕ್ರಯದಾರರ ಜೊತೆ ಷರೀಕ್ಕಾಗಿ ಉದ್ದೇಶಪೂರ್ವಕವಾಗಿ ಆಸ್ತಿಯನ್ನು ದಾವೆಯಲ್ಲಿ ಸೇರಿಸಿಲ್ಲ ಹಾಗೂ ಕ್ರಯದಾರರನ್ನು ಸಹ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

2. ಈ ಅರ್ಜಿಯ ಷೆಡ್ಯೂಲ್ ನಲ್ಲಿ ನಮೂದಿಸಿರುವ ಆಸ್ತಿಯನ್ನು ದಾವೆಯ ಷೆಡ್ಯೂಲ್ ನಲ್ಲಿ ಸೇರಿಸುವುದರಿಂದ ಎದುರುದಾರರಿಗೆ ಯಾವುದೇ ರೀತಿಯ ನಷ್ಟ ಉಂಟಾಗುವುದಿಲ್ಲ, ತಪ್ಪಿದಲ್ಲಿ ಇತರೆ ಪ್ರತಿವಾದಿಯರುಗಳಿಗೆ ಅಪಾರವಾದ ನಷ್ಟ ಉಂಟಾಗುತ್ತದೆ.

3. ಮೇಲ್ಕಂಡ ಅರ್ಜಿಗೆ ವಾದಿಯು ತಕರಾರು ಸಲ್ಲಿಸಿ, ಅರ್ಜಿಯ ಸಂಪೂರ್ಣ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ವಾದಿಯು 3 ನೇ ಪ್ರತಿವಾದಿ ಜೊತೆ ಸೇರಿ ದಾವೆಯನ್ನು ಸಲ್ಲಿಸಿರುವುದಿಲ್ಲ. ವಾದಿ ತಮ್ಮ ಹಕ್ಕಿನ ಬಾಬ್ತಿಗಾಗಿ ವಿಭಾಗ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯ ಮಾವ ಕೃಷ್ಣಯ್ಯನವರು ತಮ್ಮ ಕುಟುಂಬದ ಸದಸ್ಯರ ನಿರ್ವಹಣೆಗಾಗಿ ಸರ್ವೆ ನಂಬರ್ 146 ರಲ್ಲಿ ಜಮೀನನ್ನು ಈ ಹಿಂದೆಯೇ ಮಾರಾಟ ಮಾಡಿರುತ್ತಾರೆ. ಸದರಿ ಮಾರಾಟದ ಹಣದಿಂದ ಪ್ರತಿವಾದಿಗಳ ಯೋಗಕ್ಷೇಮವನ್ನು ಮಾಡಿರುತ್ತಾರೆ. ಆದ್ದರಿಂದ ಕೃಷ್ಣಯ್ಯರ ಜೀವಿತಾವಧಿಯಲ್ಲೇ 1 ನೇ

ಪ್ರತಿವಾದಿಯ ಅರ್ಜಿಯಲ್ಲಿ ನಮೂದು ಮಾಡಿರುವ ಜಮೀನನ್ನು ಮಾರಾಟ ಮಾಡಿರುತ್ತಾರೆ. ಆದ್ದರಿಂದ ಈ ಹಿಂದೆಯೇ ಕುಟುಂಬದ ನಿರ್ವಹಣೆಗಾಗಿ ಮಾರಾಟ ಮಾಡಿರುವ ಸದರಿ ಜಮೀನಿನ ಮೇಲೆ ವಾದಿ ಮತ್ತು ಇತರ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಬಾಧ್ಯತೆ ಇರುವುದಿಲ್ಲ. ದಾವೆಯಲ್ಲಿ ಈಗಾಗಲೇ 1 ನೇ ಪ್ರತಿವಾದಿಯ ತಂಗಿ ಲಕ್ಷ್ಮಿರವರನ್ನು 3 ನೇ ಪ್ರತಿವಾದಿಯಾಗಿ ಸೇರ್ಪಡೆ ಮಾಡಲಾಗಿರುತ್ತದೆ. 1 ನೇ ಪ್ರತಿವಾದಿ ಸುಳ್ಳು ಮಾಹಿತಿ ಆದರಿಸಿಕೊಂಡು ಅರ್ಜಿಯನ್ನು ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಆದ್ದರಿಂದ ಅರ್ಜಿಯನ್ನು ಕಾಲಮಿತಿಯಲ್ಲಿ ಸಲ್ಲಿಸದೇ ಇರುವ ಕಾರಣ ಖರ್ಚು ಸಹಿತ ವಜಾ ಮಾಡುವಂತೆ ಆಕ್ಷೇಪಿಸಿರುತ್ತಾರೆ.

**3.** ವಾದವನ್ನು ಆಲಿಸಲಾಯಿತು**.**

4. ಅರ್ಜಿಯಲ್ಲಿನ ಮತ್ತು ತಕರಾರಿನ ಅಂಶಗಳನ್ನು ಪರಿಗಣಿಸಿ ಈ ಕೆಳಕಂಡ ಅಂಶಗಳನ್ನು ರಚಿಸಲಾಗಿರುತ್ತದೆ.

**ಅಂಶ 1** ಃಪ್ರತಿವಾದಿಯು ತಮ್ಮ ಸಿಪಿಸಿ ಕಲಂ 151 ರ ಅರ್ಜಿಯಲ್ಲಿನ ಪಕ್ಷಗಾರರು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರಾಗಿರುತ್ತಾರೆ ಎಂದು ಮತ್ತು ಅರ್ಜಿಯ ಅನುಸೂಚಿ ಆಸ್ತಿ ಸಹ ಅವಶ್ಯಕವಾಗಿರುತ್ತದೆ ಎಂದು ರುಜುವಾತು ಪಡಿಸುವರೇ**?**

**ಅಂಶ 2 :** ಯಾವ ಆದೇಶ**?**

5. ಉಭಯಪಕ್ಷಗಾರರು ವಾದ-ಪ್ರತಿವಾದವನ್ನು ಆಲಿಸಿ ದಾಖಲೆಗಳನ್ನು ಪರಿಶೀಲಿಸಿ, ಈ ಕೆಳಗೆ ಚರ್ಚಿಸಲ್ಪಟ್ಟ ಕಾರಣಗಳಿಗಾಗಿ **ಅಂಶ 1 ಅನ್ನು ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.**

## ಕಾರಣಗಳು

**6. ಅಂಶ 1 :** ವಾದಿಯು ಮೇಲ್ಕಂಡ ದಾವೆಯನ್ನು ಪ್ರತಿವಾದಿಯರ ವಿರುದ್ಧ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ಸಲ್ಲಿಸಿದ್ದು, ಪ್ರತಿವಾದಿಗಳು ದಾವೆಯ ಅಂಶಗಳನ್ನು ತಮ್ಮ ತಕರಾರಿನ ಮೂಲಕ ಅಲ್ಲಗಳೆದಿರುತ್ತಾರೆ. ಮುಂದುವರೆದು, ಅರ್ಜಿ ಅನುಸೂಚಿಯಲ್ಲಿ ನಮೂದಿಸಿರುವ ಶ್ರೀ ಎಸ್.ಆರ್. ಜಯರಾಮು ಮತ್ತು ಶ್ರೀಮತಿ ಲಕ್ಷ್ಮಿ ಎಂಬುವರು ಸರ್ವೆ ನಂ. 146 ರ ಆಸ್ತಿಯನ್ನು ಖರೀದಿಸಿದ್ದು, ಸದರಿ ವ್ಯಕ್ತಿಗಳು ಅವಶ್ಯಕ ಪಕ್ಷಗಾರರಾಗಿದ್ದು, ಸದರ ಆಸ್ತಿಯು ಸಹ ದಾವೆಯಲ್ಲಿ ಸೇರ್ಪಡೆಗೊಳ್ಳಬೇಕಾಗಿರುತ್ತದೆ ಎಂದು, ಈ ಬಗ್ಗೆ ವಾದಿಗೆ ನಿರ್ದೇಶನ ನೀಡುವಂತೆ ಮೇಲ್ಕಂಡ ಅರ್ಜಿಯನ್ನು ಅಲ್ಲಿಸಿರುತ್ತಾರೆ. ಅದೇ ರೀತಿ 1 ನೇ ಪ್ರತಿವಾದಿಯು ತಮ್ಮ ಲಿಖಿತ ಹೇಳಿಕೆಯಲ್ಲಿಯೂ ಸಹ ಹೇಳಿಕೊಂಡಿರುತ್ತಾರೆ.

7. ವಾದಿ ಪರ ವಕೀಲರು ತಮ್ಮ ವಾದದಲ್ಲಿ ಅರ್ಜಿ ಅನುಸೂಚಿ ಆಸ್ತಿಯನ್ನು ಅರ್ಜಿಯಲ್ಲಿ ನಮೂದಿಸಿರುವ ವ್ಯಕ್ತಿಗಳು ಮೂಲ ಪುರುಷರಾದ ಮೃತ ಕೃಷ್ಣಯ್ಯನವರ ಜೀವಿತಾವಧಿಯಲ್ಲಿಯೇ ಖರೀದಿಸಿರುವುದರಿಂದ ಹಾಗೂ ಸದರಿ ಆಸ್ತಿಯನ್ನು ಒಟ್ಟು ಕುಟುಂಬದ ನಿರ್ವಹಣೆಗಾಗಿ ಮಾರಾಟ ಮಾಡಿರುವ ಕಾರಣ ಸದರಿ ವ್ಯಕ್ತಿಗಳು ದಾವೆಗೆ ಅವಶ್ಯಕ ಪಕ್ಷಗಾರರಾಗಿರುವುದಿಲ್ಲ ಮತ್ತು ಸದರಿ ಆಸ್ತಿ ಸಹ ಈ ದಾವೆಗೆ ಸೇರ್ಪಡೆಯಾಗುವ ಅವಶ್ಯಕತೆ ಇರುವುದಿಲ್ಲ ಎಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

8. ಆದರೆ ಇದಕ್ಕೆ ವಿರುದ್ದವಾಗಿ 1ನೇ ಪ್ರತಿವಾದಿ ಪರ ವಕೀಲರು ತಮ್ಮ ವಾದದಲ್ಲಿ, ಈ ದಾವೆಯನ್ನು ವಾದಿಯು ಒಟ್ಟು ಕುಟುಂಬದ ಆಸ್ತಿಗಳನ್ನು ವಿಭಾಗ ಕೋರಿ ದಾವೆಯನ್ನು ಸಲ್ಲಿಸಿರುವುದರಿಂದ ಹಾಗೂ ಅರ್ಜಿಯಲ್ಲಿನ ಆಸ್ತಿಯು ಸಹ ಒಟ್ಟು ಕುಟುಂಬದ ಆಸ್ತಿಯಾಗಿದ್ದು, ಸದರಿ ಆಸ್ತಿಯಲ್ಲಿಯೂ ಉಭಯ ಪಕ್ಷಗಾರರು ಸಮಾನವಾದ ಹಿಸ್ಸಾ ಹಕ್ಕನ್ನು ಹೊಂದಿರುವ ಕಾರಣ ಸದರಿ ಆಸ್ತಿಯನ್ನು ಮತ್ತು ಪಕ್ಷಗಾರರನ್ನು ಈ ದಾವೆಯಲ್ಲಿ ಸೇರಿಸುವ ಅವಶ್ಯಕತೆ ಇರುತ್ತದೆ. ತಪ್ಪಿದಲ್ಲಿ ಭಾಗಾಶಃ ವಿಭಾಗದ ದಾವೆಯಾಗುತ್ತದೆ ಎಂದು ಹಾಗೂ ಈ ಬಗ್ಗೆ ತಮ್ಮ ಪ್ರತಿವಾದ ಪತ್ರದಲ್ಲಿಯೂ ಸಹ ತಕರಾರು ಮಾಡಿರುತ್ತಾರೆ ಎಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

9. ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ್ಗೆ ವಾದಿಯು ಈ ದಾವೆಯನ್ನು ಪ್ರತಿವಾದಿಗಳ ವಿರುದ್ದ ವಿಭಾಗ ಕೋರಿ ಸಲ್ಲಿಸಿದ್ದು, ಈ ದಾವೆಯಲ್ಲಿನ ಆಸ್ತಿಗಳು ತಮ್ಮ ಒಟ್ಟು ಕುಟುಂಬದ ಪಿತ್ರಾರ್ಜಿತವಾದ ಆಸ್ತಿಗಳಾಗಿದ್ದು, ಅದರಲ್ಲಿ ತಮಗೆ ಸಮಾನವಾದ ಹಿಸ್ಸಾ ಹಕ್ಕು ಇರುತ್ತದೆ ಎಂದು ಹೇಳಿಕೊಂಡಿರುತ್ತಾರೆ. ಅದೇ ರೀತಿ 3ನೇ ಪ್ರತಿವಾದಿ ದಿನಾಂಕ 20-1-2010 ರಂದು 8ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಆಸ್ತಿಯು ತಮ್ಮ ಹಿಸ್ಸಾ ಹಕ್ಕನ್ನು ಬದ್ದಪಡಿಸುವುದಿಲ್ಲ ಎಂದು ಸಹ ಹೇಳಿಕೊಂಡಿರುತ್ತಾರೆ. ಆದರೆ ವಾದಿಯು ತಮ್ಮ ತಕರಾರಿನಲ್ಲಿ ಅರ್ಜಿಯಲ್ಲಿ ನಮೂದಿಸಿರುವ ಆಸ್ತಿ ತಮ್ಮ ಕುಟುಂಬಕ್ಕೆ ಸೇರಿರುತ್ತದೆ ಎಂಬುದನ್ನು ಒಪ್ಪಿಕೊಂಡಿದ್ದು, ಅದನ್ನು ತಮ್ಮ ತಂದೆಯಾದ ಕೃಷ್ಣಯ್ಯನವರು ತಮ್ಮ ಕುಟುಂಬದ ನಿರ್ವಹಣೆಗಾಗಿ ಮಾರಾಟ ಮಾಡಿರುತ್ತಾರೆ ಎಂದು ಹೇಳಿಕೊಂಡಿರುತ್ತಾರೆ. 1ನೇ ಪ್ರತಿವಾದಿಯು ಸಹ ತಮ್ಮ ಲಿಖಿತ ಹೇಳಿಕೆಯ ಖಂಡಿಕೆ 8ರಲ್ಲಿ ದಿನಾಂಕ 03-05-1993 ರಂದು ಅರ್ಜಿಯಲ್ಲಿ

ನಮೂದಿಸಿರುವ ವ್ಯಕ್ತಿಗಳಿಗೆ ಮಾರಾಟ ಮಾಡಿರುವ ಆಸ್ತಿಯನ್ನು ಕುಟುಂಬದ ನಿರ್ವಹಣೆಗಾಗಿ ಮಾರಾಟ ಮಾಡಿಲ್ಲದೇ ಇರುವುದರಿಂದ ಮತ್ತು ಸದರಿ ಆಸ್ತಿಯೂ ಸಹ ಪಿತ್ರಾರ್ಜಿತವಾದ ಆಸ್ತಿಯಾಗಿರುವುದರಿಂದ ಸದರಿ ಸ್ವತ್ತನ್ನು ಮತ್ತು ಕ್ರಯದಾರರನ್ನು ಈ ದಾವೆಯಲ್ಲಿ ಉದ್ದೇಶ ಪೂರ್ವಕವಾಗಿ ಸೇರಿಸಿರುವುದಿಲ್ಲ ಎಂದು ಆಕ್ಷೇಪಿಸಿರುತ್ತಾರೆ.

10. ಅರ್ಜಿಯ ಅನುಸೂಚಿ ಆಸ್ತಿ ಮತ್ತು ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ ಎಂದು ಉಭಯ ಪಕ್ಷಗಾರರು ಒಪ್ಪಿಕೊಂಡಿದ್ದು, ಸದರಿ ಆಸ್ತಿಯನ್ನು ಒಟ್ಟು ಕುಟುಂಬದ ನಿರ್ವಹಣೆಗಾಗಿ ಮಾರಾಟ ಮಾಡಿರುತ್ತಾರೆಯೇ ಎಂಬುದರ ಬಗ್ಗೆ ಮತ್ತು ಸದರಿ ಆಸ್ತಿಯಲ್ಲಿ ಒಟ್ಟು ಕುಟುಂಬದ ಎಲ್ಲಾ ಸದಸ್ಯರಿಗೆ ವಿಭಾಗದ ಹಕ್ಕು ಇರುತ್ತದೆಯೇ ಎಂಬುದರ ಬಗ್ಗೆ ಸೂಕ್ತ ಸಾಕ್ಷ್ಯ ಮತ್ತು ದಾಖಲೆಗಳ ಮೂಲಕ ರುಜುವಾತುಪಡಿಸಬೇಕಾಗಿರುವುದರಿಂದ ಮತ್ತು ವಿಭಾಗದ ದಾವೆಯಲ್ಲಿ ಒಟ್ಟು ಕುಟುಂಬಕ್ಕೆ ಅಥವಾ ಪಿತ್ರಾರ್ಜಿತವಾದ ಆಸ್ತಿಗಳು ಆಗಿರುತ್ತವೆ ಎನ್ನಲಾದ ಎಲ್ಲಾ ಆಸ್ತಿಗಳನ್ನು ಹಾಗೂ ಸದರಿ ಆಸ್ತಿಗಳಿಗೆ ಸಂಬಂಧಿಸಿದ ಎಲ್ಲಾ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಗೊಳಿಸುವುದು ಅವಶ್ಯಕವಾಗಿರುತ್ತದೆ. ತಪ್ಪಿದಲ್ಲಿ ದಾವೆಯು ಭಾಗಾಶಃ ತೀರ್ಪಿಗೆ ಒಳಪಡುವ ಸಾಧ್ಯತೆ ಇರುತ್ತದೆ. ಮುಂದುವರೆದು ಅವಶ್ಯಕ ಪಕ್ಷಗಾರರು ಮತ್ತು ಆಸ್ತಿಗಳ ಸೇರ್ಪಡೆಯ ಬಗ್ಗೆ ವಿವಾದಾಂಶ 6 ಅನ್ನು ರಚಿಸಿರುವುದರಿಂದ ಸದರಿ ಎಲ್ಲಾ ಅಂಶಗಳ ರುಜುವಾತಿಗಾಗಿ ಅರ್ಜಿಯಲ್ಲಿ ನಮೂದಿಸಿರುವ ವ್ಯಕ್ತಿಗಳು ಮತ್ತು ಆಸ್ತಿಯಲ್ಲಿ ಈ ದಾವೆಯಲ್ಲಿ ಸೇರ್ಪಡೆ ಗೊಳಿಸುವುದು ಅವಶ್ಯಕವಾಗಿರುತ್ತದೆ. ತಪ್ಪಿದಲ್ಲಿ ಉಭಯ ಪಕ್ಷಗಾರರ ನಡುವೆ ಹಲವಾರು ವ್ಯಾಜ್ಯಗಳು ಉದ್ಭವಿಸುವ ಸಾಧ್ಯತೆ ಇರುವುದರಿಂದ ಪ್ರಸ್ತುತ ಅರ್ಜಿಯನ್ನು

ಪರಿಗಣಿಸಬಹುದಾಗಿರುತ್ತದೆ. **ಆದುದರಿಂದ ಅಂಶ 1 ಅನ್ನು ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.**

11. **ಅಂಶ 2 :** ಈ ಮೇಲೆ ಚರ್ಚಿಸಲ್ಪಟ್ಟ ಕಾರಣಗಳಿಗಾಗಿ ಈ ಕೆಳಕಂಡಂತೆ :

**:: ಆದೇಶ ::**

ಪ್ರತಿವಾದಿ ಸಲ್ಲಿಸಿರುವ ಸಿಪಿಸಿ ಕಲಂ 151 ರ ಮಧ್ಯಕಾಲೀನ ಅರ್ಜಿ ಸಂಖ್ಯೆ 6 ಅನ್ನು ಪುರಸ್ಕರಿಸಲಾಗಿದೆ.

ಅರ್ಜಿಯ ಅನುಸೂಚಿಯಲ್ಲಿ ನಮೂದಿಸಿರುವ ಎಸ್ ಆರ್ ಜಯರಾಮು ಮತ್ತು ಶ್ರೀಮತಿ ಲಕ್ಷ್ಮಿ ಎಂಬುವವರನ್ನು ಪ್ರತಿವಾದಿಗಳನ್ನಾಗಿ ಹಾಗೂ ಅರ್ಜಿಯ ಅನುಸೂಚಿ ಆಸ್ತಿಯನ್ನು ದಾವಾನುಸೂಚಿಯಲ್ಲಿ ಸೇರಿಸುವಂತೆ ವಾದಿಗೆ ಈ ಮೂಲಕ ನಿರ್ದೇಶಿಸಲಾಗಿದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ ದ ನ್ಯಾ ದಂ ರವರು, ಶ್ರೀರಂಗಪಟ್ಟಣ.**